ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ವರದಿಯನ್ನು ತರಿಸಿ ಇದಕ್ಕೆ ಉತ್ತರ ಕೊಡುತ್ತಾರೆ.

## (iv) ಮಂಗಳೂರು ನಗರದಲ್ಲಿ ವಿದ್ಯುತ್ ಸೂಪರಿಂಟೆಂಡೆಂಟ್‌ರವರ ಕಛೇರಿಯನ್ನು ಸ್ಥಾಪಿಸುವ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಬೆಂಗಳೂರು ನಂತರ ಮಂಗಳೂರು ನಗರವೇ ಎರಡನೇ ದೊಡ್ಡ ನಗರವಾಗಿರುತ್ತದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಇಲಾಖೆಯ ಬಗ್ಗೆ ಬೇಕಾದ ವ್ಯವಸ್ಥೆಗಳನ್ನು ಮಾಡಿಕೊಳ್ಳಲು ಸಾಕಷ್ಟು ಅನುಕೂಲತೆ ಬೇಕು. ವಿದ್ಯುತ್ ಸೂಪರಿಂಟೆಂಡೆಂಟ್‌ರವರ ಆಫೀಸು ಶಿವಮೊಗ್ಗದಲ್ಲಿರುವುದರಿಂದ ದಕ್ಷಿಣ ಕನ್ನಡದವರಿಗೆ ತುಂಬಾ ಅಡಚಣೆಯಾಗಿರುತ್ತದೆ. ವಿದ್ಯುತ್ತಿಗೆ ಸಂಬಂಧಿಸಿದ ಅನೇಕ ವಿಚಾರಗಳಿಗೆ ಶಿವಮೊಗ್ಗಕ್ಕೆ ಹೋಗಿ ಬರಬೇಕಾಗುತ್ತದೆ.ಆದಕಾರಣ ಜಿಲ್ಲೆಯ ಹಿತದೃಷ್ಟಿಯಿಂದ ವಿದ್ಯುತ್ ಸೂಪರಿಂಟೆಂಡೆಂಟ್ ಇಂಜಿನಿಯರ್‌ರ ಆಫೀಸನ್ನು ಶಿವಮೊಗ್ಗದಿಂದ ವರ್ಗಾಯಿಸಿ ಮಂಗಳೂರಿನಲ್ಲಿ ಮಾಡುವುದು ಮುಖ್ಯವಾಗಿರುತ್ತದೆ. ಅಲ್ಲದೆ ದಕ್ಷಿಣ ಕನ್ನಡದಲ್ಲಿ ಮೀಟರಿನ ಭಾರೀ ಕೊರತೆ ಇದೆ ವಿದ್ಯುತ್ ಗ್ರಾಹಕರಿಗೆ ಭಾರೀ ಕಷ್ಟ ನಷ್ಟವೂ ಆಗುತ್ತಿದೆ. ಆದಕಾರಣ ದಕ್ಷಿಣ ಕನ್ನಡಕ್ಕೆ ಅತೀ ಶೀಘ್ರ ೫ ಸಾವಿರ ವಿದ್ಯುತ್ ಮೀಟರ್‌ಗಳನ್ನು ಒದಗಿಸುವುದು ಅತೀ ಪ್ರಾಮುಖ್ಯವಾಗಿರುತ್ತದೆ. ಈ ಕುರಿತು ವಿದ್ಯುತ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ವಿಶೇಷ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರ ಕಛೇರಿ ಶಿವಮೊಗ್ಗದಲ್ಲಿದೆ. ಅದನ್ನು ಮಂಗಳೂರಿಗೆ ವರ್ಗಾಯಿಸುವುದು ಸಧ್ಯದಲ್ಲಿ ಮಂಡಳಿಯ ಗಮನದಲ್ಲಿಲ್ಲ. ಏತಕ್ಕೆಂದರೆ ಶಿವಮೊಗ್ಗದಲ್ಲಿರುವ ಬಹಳ ಮುಖ್ಯವಾದ ೨೨೦.೧೧೦ ಕೆ.ವಿ ಬಿ. ರೀವಿಂಗ್ ಸ್ಟೇಷನನ್ನು ನೋಡಿಕೊಳ್ಳಬೇಕು. ಹಾಲಿ ಮಂಗಳೂರಿನಲ್ಲಿ ಇನ್ನೂ ಹೆಚ್ಚಿನ ಶ್ರೇಣಿಯ ಚೀಫ್ ಇಂಜಿನಿಯರ್‌ರವರ ಕಛೇರಿ ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿಯಲ್ಲಿ ತಾಂತ್ರಿಕ ಕೆಲಸಗಳು ನಡೆಯುತ್ತಿರುವುದರಿಂದ ಬಳಕೆದಾರರಿಗೆ ಏನೂ ತೊಂದರೆಯಾಗುವುದಿಲ್ಲ. ಆದ್ದರಿಂದ ವಿಶೇಷ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರ ಕಛೇರಿಯನ್ನು ಮಂಗಳೂರಿಗೆ ವರ್ಗಾಯಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ೧೫೦ ಹೆಚ್ಚು ಮಿಾರಿ ವಿಶೇಷ ಮೀಟರ್‌ಗಳನ್ನು ಶಿವಮೊಗ್ಗಕ್ಕೆ ಕಳುಹಿಸಲಾಗಿದೆ. ಇನ್ನೂ ನಾಲ್ಕು ಸಾವಿರ ಮೀಟರ್‌ಗಳನ್ನು ಮಂಗಳೂರಿಗೆ ಕಳುಹಿಸಲಾಗುವುದು.

## (v) ಗುಲ್ಬರ್ಗಾ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ

೨-೦೦ ಪಿ.ಎಂ.

ಶ್ರೀ ಆರ್. ವೆಂಕಟರಾಮಯ್ಯ(ಮುಳಬಾಗಿಲು).—

ಗುಲ್ಬರ್ಗಾ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ತುಂಬಾ ಗಂಭೀರವಾಗಿದೆ. ನಗರದಲ್ಲಿ ನೀರಿಗಾಗಿ ಜನತೆ ಪರದಾಡುತ್ತಾ ಇದ್ದು ಪರಿಸ್ಥಿತಿಯು ಭೀಕರವಾಗಿದ್ದು ಅಲ್ಲಿನ ಜನತೆ ಹೋರಾಟದ ಹಾದಿಗಿಳಿದಿದ್ದಾರೆ. ಪದೇಪದೇ ಎಲ್ಲಾ ಸರ್ಕಾರಗಳು ಕುಡಿಯುವ ನೀರಿನ ಬವಣೆ ತಪ್ಪಿಸುವುದಾಗಿ ಹೇಳಿದ್ದರೂ ಸಮಸ್ಯೆ ಹಾಗೆಯೇ ಉಳಿದು ಜನತೆ ತೊಂದರೆಗೆ ಈಡಾಗಿದ್ದಾರೆ. ಈಗಲೇ ಸಮಸ್ಯೆ ಜಟಿಲವಿದ್ದು ಎರಡು ತಿಂಗಳಲ್ಲಿ ಪರಿಸ್ಥಿತಿ ಇನ್ನೂ ಭೀಕರವಾಗಲಿರುವುದರಿಂದ ಇದನ್ನು ತುರ್ತಾಗಿ ಸರಿಪಡಿಸಲು ಕೋರಿ ನೀರಿನ ಸರಬರಾಜು ಸರಿಪಡಿಸಲು ಈ ಸದನದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.(ಕಾನೂನು ಮಂತ್ರಿ ಮತ್ತು ನಗರಾಭಿವೃದ್ಧಿ ಸಚಿವರು)—

ಈಗಾಗಲೇ ಗುಲ್ಬರ್ಗಾ ನಗರದಲ್ಲಿ ೨೫೭ ಕೊಳವೆ ಬಾವಿಗಳನ್ನು ತೋಡಿಸಲಾಗಿದೆ. ಇದರಲ್ಲಿ ೭೭ ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪು ಜೋಡಿಸಲಾಗಿದೆ. ಉಳಿದ ೧೬೦ ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಜೋಡಿಸಲಾಗಿದೆ. ಈ ಕೆಲಸಕ್ಕೆ ಈಗಾಗಲೇ ೪೫ ಲಕ್ಷ ರೂಪಾಯಿಗಳು ಈವರೆಗೆ ಖರ್ಚಾಗಿದೆ. ಈ ಮೇಲೆ ಹೇಳಿದ ೨೫೭ ಕೊಳವೆ ಬಾವಿಗಳಿಂದ ೧೫ ೫೦ ಲಕ್ಷ ಗ್ಯಾಲನ್ ನೀರಿನ್ನು ಒದಗಿಸಲಾಗುತ್ತಿದೆ.

ಇದರ ಜೊತೆಗೆ ಬೋಸ್ಪಗ ಕೆರೆಯಿಂದ ೧೫ ಲಕ್ಷ ಗ್ಯಾಲನ್ ನೀರನ್ನು ಸಹ ಕೊಡಲಾಗುತ್ತಿದೆ. ಈ ಕೊಳವೆ ಬಾವಿ ಮತ್ತು ಬೋಸಗ ಕರೆಯಿಂದ ಒಟ್ಟಿಗೆ ೩೦.೫೦ ಲಕ್ಷ ಗ್ಯಾಲನ್ ಪ್ರತಿದಿವಸ ಕೊಡಲಾಗುತ್ತಿದೆ. ಇದರಿಂದ ಗುಲ್ಬರ್ಗ ಜನತೆಗೆ (೨.೭೫ ಲಕ್ಷ ಜನಸಂಖ್ಯೆ) ೧೧ ಗ್ಯಾಲನ್ ನೀರನ್ನು ಪ್ರತಿಯೊಬ್ಬರಿಗೆ ಸರಬರಾಜು ಮಾಡಲಾಗುತ್ತಿದೆ, ಈ ನೀರಿನ ಪ್ರಮಾಣ ಏಪ್ರಿಲ್ ಕೊನೆಯ ಹೊತ್ತಿಗೆ ಸರಿಹೋಗುತ್ತದೆ. ಏಪ್ರಿಲ್ ನಂತರ ಕೊಳವೆ ಬಾವಿಗಳಿಂದಲೇ ಒಟ್ಟು ೧೫.೫೦ ಲಕ್ಷ ಗ್ಯಾಲನ್ ನೀರನ್ನು ಸರಬರಾಜು ಮಾಡಲಾಗುವುದು. ಆಂದರೆ ತಲಾ ೬ ರಿಂದ ೭ ಗ್ಯಾಲನ್ ನೀರು ಸರಬರಾಜಾಗುವ ನಿರೀಕ್ಷೆ ಇದೆ. ಇದಲ್ಲದೆ ನೀರಿನ ಪೂರೈಕೆ ಪ್ರಮಾಣವನ್ನು ಹೆಚ್ಚಿಸಲು ಸ್ವಂತ ಕೊಳವೆ ಬಾವಿ ಮಾಲೀಕರಿಗೆ ವಿದ್ಯುತ್ ದರವನ್ನು ಮಂಡಳಿಯ ಮುಖಾಂತರ ಕೊಡಿಸಿ ಜನರಿಗೆ ಅವರ ಬಾವಿಗಳಿಂದ ಒಂದು ನಳ ಹೊರಗೆ ಹಾಕಿಸಿ ನೀರು ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ವ್ಯವಸ್ಥೆಯನ್ನು ೨೫ರಿಂದ ೩೦ ಕೊಳವೆ ಬಾವಿಗಳಿಂದ ಮಾಡಲಾಗುತ್ತದೆ. ಇದಲ್ಲದೆ ಮುಂದಿನ ಎರಡು ತಿಂಗಳು ನೀರಿನ ಅವಶ್ಯಕತೆಯನ್ನು ಯೋಚಿಸಿ ಸರ್ಕಾರಕ್ಕೆ ಇನ್ನೂ ೩೦೦ ಕೊಳವೆ ಬಾವಿಗಳನ್ನು ಮಂಜೂರು ಮಾಡಲು ಕೋರಲಾಗಿದೆ.

## (vi) ಶಿವಮೊಗ್ಗ ಜಿಲ್ಲೆಯ ಹೊಸನಗರ ಪುರಸಭೆಯಲ್ಲಿ ಕುಡಿಯುವ ನೀರನ್ನು ಒದಗಿಸುವ ಬಗ್ಗೆ

ಶ್ರೀ ಬಿ. ಸ್ವಾಮಿರಾವ್, (ಹೊಸನಗರ)—ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯ ಹೊಸನಗರ ಪುರಸಭೆಯಲ್ಲಿ ಕುಡಿಯುವ ನೀರಿನಪೂರೈಕೆಯ ಬಗ್ಗೆ ೨೬ ಲಕ್ಷ ರೂಪಾಯಿಗಳ ಯೋಜನೆಯನ್ನು ಹಿಂದಿನ ಸರ್ಕಾರ ಮಂಜೂರುಮಾಡಿತ್ತು. ಆದರೆ ಈತನಕ ಏನೂ ಕೆಲಸವನ್ನು ಕೈಗೆತ್ತಿಕೊಂಡಿಲ್ಲ. ಅಲ್ಪಸ್ವಲ್ಪ ಪೈಪುಗಳನ್ನು ಸಂಗ್ರಹಣೆ ಮಾಡಿದ್ದರೂ ಕೆಲವು ಸಮಾಜ ದ್ರೋಹಿಗಳು ಅವುಗಳನ್ನು ತಮ್ಮ ಸ್ವಂತ ಕೆಲಸಕ್ಕೆ ಉಪಯೋಗಿಸಿಕೊಳ್ಳುತ್ತಿರುವುದನ್ನು ನೋಡಿದರೆ ಹೊಸನಗರದ ಕುಡಿಯುವ ನೀರಿನ ಬವಣೆ ಇನ್ನೂ ಹೆಚ್ಚಾಗಲು ಸಹಕರಿಸುವಂತಿದೆ. ವಿದ್ಯಾರ್ಥಿಗಳು ಆಸ್ಪತ್ರೆ ಮೊದಲಾದ ಅತಿ ಹೆಚ್ಚು ಸಾರ್ವಜನಿಕ ಸಂಸ್ಥೆಗಳಿಗೂ ಸಹ ನೀರಿಲ್ಲದೆ ಬವಣೆ ಉಂಟಾಗಿದೆ. ದಿನಾಂಕ ೨೫-೮-೮೫ರಂದು ೩೩ಳಿನೇ ವಿಧಿಯನ್ವಯ ಸದನದಲ್ಲಿ ಈ ವಿಷಯ ಪ್ರಸ್ತಾಪಿಸಲಾಗಿತ್ತು. ಆದಕ್ಕೂ ಸಹ ಈತನಕ ಉತ್ತರ ಬಂದಿಲ್ಲ. ಸಾರ್ವಜನಿಕ ಕೆಲಸಗಳಿಗೆ ಮಾನ್ಯ ಮಂತ್ರಿಗಳಿರುವ ನಿಷ್ಪೀಮ ನಿರ್ಲಕ್ಷ್ಯಕ್ಕೆ ಇದೊಂದು ಉದಾಹರಣೆ. ವಿರೋಧಪಕ್ಷದ ಶಾಸಕರ ಕ್ಷೇತ್ರಗಳ ಬಗ್ಗೆ ತೋರುತ್ತಿರುವ ಮಲತಾಯಿ ಧೋರಣೆಗೆ ಇನ್ನೊಂದು ನಿದರ್ಶನ. ಈ ವಿಚಾರದ ಬಗ್ಗೆ ಸರ್ಕಾರದ ಹೇಳಿಕೆಯನ್ನು ಮತ್ತು ಕುಡಿಯುವ ನೀರಿನ ಪರ್ಯಾಯ ವ್ಯವಸ್ಥೆಯ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—ಶಿವಮೊಗ್ಗ ಜಿಲ್ಲೆಯಲ್ಲಿ ಹೊಸನಗರ ಪಟ್ಟಣದ ಜನಸಂಖ್ಯೆ ೧೯೮೧ರ ಜನಗಣತಿ ಪ್ರಕಾರ ೪೫೬೧ ಆಗಿದ್ದು ಈಗ ಸುಮಾರು ೫೦೦೦ಕ್ಕೆ ಏರಿದೆ. ಇಲ್ಲಿಗೆ ೧೯೭೦-೭೩ರಲ್ಲಿ ಕಾರ್ಯಗತವಾದ ನೀರು ಸರಬರಾಜಿನ ಯೋಜನೆಯಲ್ಲಿ ಐದು ಕೊಳವೆ ಬಾವಿಗಳಿಂದ ದಿನಂಪ್ರತಿ ತಲಾ ೨೩ ಲೀಟರ್‌ಗಳಷ್ಟು ನೀರನ್ನು ಸರಬರಾಜು ಮಾಡಲಾಗುತ್ತಿತ್ತು. ೧೯೮೩-೮೪ರ ಅಭಾವ ಪರಿಹಾರ ಕಾರ್ಯದಲ್ಲಿ ನಾಲ್ಕು ಕೊಳವೆ ಬಾವಿಗಳನ್ನು ತೋಡಿ ನೀರು ಸರಬರಾಜನ್ನು ದಿನಂಪ್ರತಿ ತಲಾ ೪೫ ಲೀಟರ್‌ಗಳಿಗೆ ಏರಿಸಲಾಯಿತು. ಹೊಸನಗರಕ್ಕೆ ಸಮಗ್ರ ನೀರು ಸರಬರಾಜು ಯೋಜನೆಯ ಅಂಗವಾಗಿ ಶರಾವತಿ ಜಲಾಶಯದ ಹಿಂಬದಿಯ ನೀರನ್ನು ಅಂದರೆ ಹೊಸನಗರ-ನಗರ ರಸ್ತೆಯಲ್ಲಿರುವ ಕಲ್ಲಿ ಹಳ್ಳಕ್ಕೆ ಅಡ್ಡಗೋಡೆ ಕಟ್ಟಿ ನೀರನ್ನು ಸಂಗ್ರಹಿಸಿ ಪಟ್ಟಣಕ್ಕೆ ನೀರು ಸರಬರಾಜು ಮಾಡಲು ೨೬ ಲಕ್ಷ ರೂಪಾಯಿಗಳ ಅಂದಾಜನ್ನು ಸರ್ಕಾರವು ಸಂಖ್ಯೆ ವನಇ ೩೫ ಯು ೮೮ ಎಸ್: ೮೦ ದಿನಾಂಕ ೨೨-೦೨-೮೮ ಆಜ್ಞೆಯಲ್ಲಿ ಮಂಜೂರು ಮಾಡಿತು. ಈ ಅಂದಾಜಿಗೆ ಮಂಡಳಿಯು ೩೦-೩-೮೫ರಲ್ಲಿ ಇದೇ ಮೊತ್ತಕ್ಕೆ ತಾಂತ್ರಿಕ ಅನುಮೋದನೆಯನ್ನು ನೀಡಿತು. ಈ ಯೋಜನೆಯಲ್ಲಿ ಈಗಾಗಲೇ ವಿತರಣಾ ಕೊಳವೆಗಳನ್ನು ಮತ್ತು ಎರಡು ಕೊಳವೆ ಬಾವಿಗಳನ್ನು ಕೊರೆದು ವಿದ್ಯುತ್‌ಚಾಲಿತ ಪಂಪುಗಳನ್ನು ಅಳವಡಿಸಲಾಗಿದೆ, ೧ ಲಕ್ಷ ಗ್ಯಾಲನ್ ಮೇಲ್ಮಟ್ಟದ ಜಲಸಂಗ್ರಹಾಗಾರ ಕಟ್ಟಲು ಗುತ್ತಿಗೆದಾರರನ್ನು ನೇಮಿಸಲಾಗಿದೆ. ಏರು ಕೊಳವೆಗೆ ಬೇಕಾಗುವ ೬ ಇಂಚಿನ ಕಬ್ಬಿಣದ ಕೊಳವೆಗಳನ್ನು ತರಿಸಲಾಗಿದೆ. ಎಲ್ಲವೂ ಸ್ಥಾಕಿನಲ್ಲಿ